ಸಾಕ್ಷಿಯನ್ನು ಇಂದು ದಿನಾಂಕಃ **06/06/2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಧಿಸಲಾಯಿತು.

ಸ್ವ ಪ್ರಮಾಣಿತ ಹೇಳಿಕೆಃ

ನಾನು ಇಂದು ಸಲ್ಲಿಸಿರುವ ಸ್ವ ಪ್ರಮಾಣಿತ ಹೇಳಿಕೆ ಅಂಶಗಳು ನನ್ನ ತಿಳುವಳಿಕೆಯ ಮಟ್ಟಿಗೆ ಸತ್ಯವಾಗಿರುತ್ತವೆ. ಅದನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

1. ದಿಃ 21-05-2021 ರೂ. 1,00,000/- ಕ್ಕೆ ಸಂಬಂದಿಸಿದಂತೆ S.B.I ಬ್ಯಾಂಕ್ ಬೀದರ ಶಾಖೆಯ ಚೆಕ್ ಸಂಖ್ಯೆ-382628 ರ ಮೂಲ ಚೆಕನ್ನು **ನಿಪಿ-1** ಎಂದು ಗುರ್ತಿಸಲಾಯಿತು, ಆರೋಪಿ ಸಹಿಯನ್ನು **ನಿಪಿ-1 ಎ,** ಎಂದು ಗುರ್ತಿಸಲಾಯಿತು.

2. ಹಿಂಬರಹವನ್ನು **ನಿಪಿ-2** ಎಂದು ಗುರುತಿಸಲಾಯಿತು.

3. ಆರೋಪಿಗೆ ವಕೀಲರ ಮುಖಾಂತರ ನೀಡಿರುವ ನೊಟಿಸಿನ ಕಚೇರಿಯ ಪ್ರತಿಯನ್ನು **ನಿಪಿ-3** ಎಂದು ಗುರ್ತಿಸಲಾಯಿತು.

4. ಅಂಚೆ ರಸೀದಿಯನ್ನು **ನಿಪಿ-4** ಎಂದು ಗುರ್ತಿಸಲಾಯಿತು.

5. Adressy refussed ಹಿಂಬರಹದೊಂದಿಗೆ ಜಾರಿಯಾಗದೇ ಹಿಂದಿರುಗಿದ ಅಂಚೆ ಲಕೋಟೆಯನ್ನು **ನಿಪಿ-5** ಎಂದು, ಗುರ್ತಿಸಲಾಯಿತು. ಮೂಲ ನೋಟಿಸನ್ನು **ನಿಪಿ-5** ಎ ಎಂದು**,** ಗುರ್ತಿಸಲಾಯಿತು.

ಆದ್ದರಿಂದ ದೂರಿನಲ್ಲಿ ಕೋರಿಕೊಂಡಂತೆ ಆದೇಶ ಮಾಡಲು ಪ್ರಾರ್ಥನೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ ನ್ಯಾಯಾಲಯ ಬೀದರ

<u>ಸಾಕ್ಷಿಯನ್ನು ಇಂದು ದಿನಾಂಕಃ **20/06/2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಧಿಸಲಾಯಿತು.</u>

<u>**ಪಾಟೀ ಸವಾಲು: ಆರೋಪಿ ಪರ ಶ್ರೀ: ಜೆ.ಎಂ.ಎಸ್. ವಕೀಲರಿಂದ:**</u>

2. ನಾನು ಆರೋಪಿ ಸ್ನೇಹಿತರು ಎಂದರ ಸರಿ. ಎಸ್.ಬಿ.ಐ. ಬ್ಯಾಂಕ್ ಚೆಕ್ ನಂಬರ್ ನನಗೆ ನೆನಪಿಲ್ಲ. ಆರೋಪಿ ನನ್ನ ಸ್ನೇಹಿತ ಶಕೀಲ ರಾಜೋಳೆ ಅವರಿಂದ ಪರಿಚಯ. ಆರೋಪಿಯನ್ನು ನಾನು ರೂ. 4 ಲಕ್ಷ ಹಣವನ್ನು ನಗದಾಗಿ ನನ್ನ ಮನೆಯಲ್ಲಿಯೇ ಕೊಟ್ಟಿದ್ದೇನೆ, ಆ ಸಮಯದಲ್ಲಿ ನಾವಿಬ್ಬರೆ ಇದ್ದೇವು. ಆರೋಪಿ ಅದೇ ದಿನ ರೂ.1, 99,000/- ಒಂದು ಚೆಕ್ ಹಾಗೂ ತಲಾ 1 ಲಕ್ಷದ 2 ಚೆಕ್ ಗಳನ್ನು ಬರೆದು ಕೊಟ್ಟಿದ್ದನು. ಈ ಕೇಸ್ ನಲ್ಲಿ ನಾನು 2 ಚೆಕ್ ಗಳನ್ನು ಹಾಕಿದ್ದೇನೆ. ಸದರಿ ಎರಡೂ ಚೆಕ್ ಗಳ ನಂಬರ್ ನ್ನು ದೂರಿನಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ನೋಡಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ದಿನಾಂಕದಂದು ಚೆಕ್ ಗಳನ್ನು ಆರೋಪಿಯಿಂದ ಪಡೆದಿದ್ದೇನೆ ಎಂದು ನಮೂದಿದೆಯೇ ಎಂದರೆ ನೆನಪಿಲ್ಲ. 3 ವರ್ಷದ ಹಿಂದೆ ನಾನು ಆರೋಪಿಯಿಂದ ಚೆಕ್ ಪಡೆದಿದ್ದೆ. ಚೆಕ್ ಕೊಟ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ನಿಪಿ-1 ರ ಚೆಕ್ ನ್ನು ಆರೋಪಿ ನನಗೆ ಕೊಟ್ಟಿಲ್ಲ ವಿಜಯಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ.

3. ನಾನು ಕಳುಹಿಸಿದ್ದ ನೋಟಿಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನೋಟಿಸ್ ಪಡೆಯಲು ತಿರಸ್ಕಾರ ಮಾಡಿದ್ದಾರೆ ಎಂದು ನುಡಿಯುತ್ತಾರೆ. ವಿಜಯ ಹಾಗೂ ಆರೋಪಿ ಮಧ್ಯ ಹಣಕಾಸಿನ ವ್ಯವಹಾರವಿದ್ದು, ಅವರಿಂದ ಚೆಕ್ ನ್ನು ಪಡೆದು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೂ ಆರೋಪಿಗೂ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು

ಯಾವುದೇ ಹಣ ಕೊಟ್ಟಿಲ್ಲ, ಆರೋಪಿ ಸರ್ಕಾರಿ ನೌಕರನಿದ್ದ ಕಾರಣ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಬರವಣಿಗೆ ಆರೋಪಿಯದಲ್ಲ ಎಂದರೆ ಸಾಕ್ಷಿ ಸರಿಯಲ್ಲ, ಅವರೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

(ಓ.ಹೇ.ಕೇ.ಸ.ಇದೆ.)

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ ನ್ಯಾಯಾಲಯ ಬೀದರ